



13
ರಾಜಭವನಕ್ಕೆ ಹೋದ ಮೇಲೆ, ಸ್ವಾಮೀಜಿ ಒಂದು ದಿನ ಆ ಚಪ್ಪಲಿ ಹೊಲಿಯುವ ವ್ಯಕ್ತಿ ತೋರಿಸಿದ ಔದಾರ್ಯದ ಬಗ್ಗೆ ರಾಜನ ಹತ್ತಿರ ಹೇಳಿದರು.
ಹೌದೇ! ಇಂತಹ ಉದಾರಿಗಳು ನನ್ನ ದೇಶದಲ್ಲಿ ಇದ್ದಾರೆಯೇ! ಸ್ವಾಮೀಜಿ, ಆ ಚಪ್ಪಲಿ ಹೊಲಿಯುವ ವ್ಯಕ್ತಿಯನ್ನು ನಾನು ನೋಡಬೇಕು.


14
ಆ ದಿನ ರಾತ್ರಿ ರಾಜಭಟರು ಆ ಚಮ್ಮಾರನ ಮನೆಗೆ ಹೋದರು.
ನೀನೇನಾ ಸ್ವಾಮೀಜಿಯವರಿಗೆ ಚಪಾತಿ ಕೊಟ್ಟಿದ್ದು? ಮಹಾರಾಜರು ನಿನ್ನನ್ನು ಕರೆದುಕೊಂಡು ಬರಲು ಹೇಳಿದ್ದಾರೆ.
ಮಹಾರಾಜರು ನನ್ನನ್ನು ಕರೆದುಕೊಂಡು ಬರಲು ಹೇಳಿದ್ದಾರೇನು? ನಾನು ಯಾವ ತಪ್ಪನ್ನೂ ಮಾಡಿಲ್ಲವಲ್ಲ!


15
ಆ ಚಮ್ಮಾರ ನಿರ್ಗತಿಕ. ಮಹಾರಾಜನನ್ನು ನೆನಪಿಸಿಕೊಂಡು ಭಯದಿಂದಲೂ, ಸ್ವಾಮೀಜಿಯವರನ್ನು ನೆನಪಿಸಿಕೊಂಡು ಧೈರ್ಯದಿಂದಲೂ ರಾಜಭವನಕ್ಕೆ ತೆರಳಿದನು. ಆದರೆ ಆಶ್ಚರ್ಯ! ರಾಜನ ಆಸ್ಥಾನಕ್ಕೆ ಆತನು ಹೋಗುತ್ತಲೇ ಮಹಾರಾಜನು ಅವನನ್ನು ಸ್ವಾಗತಿಸಿದ.
ಬನ್ನಿ ಧನ್ಯಾತ್ಮರೇ ! ನನ್ನ ಗುರುವಿನ ಹಸಿವನ್ನು ತೀರಿಸಿದ ನೀವು ಇನ್ನು ಮುಂದೆ ಯಾವ ಕೊರತೆಯೂ ಇಲ್ಲದೇ ಜೀವಿಸಬೇಕು. ಇದೋ ಈ ಕಾಣಿಕೆಗಳನ್ನು ಸ್ವೀಕರಿಸಿ.
ಆ ಚಮ್ಮಾರ ದಿಗ್ಭ್ರಾಂತಿಗೊಂಡನು. ಆನಂದದಿಂದ ತಬ್ಬಿಬ್ಬುಗೊಂಡನು. ಸ್ವಾಮೀಜಿ ಆತನನ್ನು ಅಭಿನಂದಿಸುತ್ತಾ ಪ್ರಶಾಂತವಾಗಿ ನಿಂತುಕೊಂಡರು.

# ‘ಸ್ವಾಮಿ ವಿವೇಕಾನಂದ ಜ್ಯೋತಿಯಾತ್ರೆ’– ಕರ್ನಾಟಕದಲ್ಲಿ ಒಂದು ಐತಿಹಾಸಿಕ ಅಭಿಯಾನ




ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯನ್ನು ರಾಷ್ಟ್ರಾದ್ಯಂತ, ಅಷ್ಟೇ ಏಕೆ, ಜಗತ್ತಿನಾದ್ಯಂತ ಅನೇಕ ಕಡೆಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ವಿವೇಕಾನಂದರ ಚಿಂತನೆಗಳನ್ನು ಮನೆಮನೆಗೆ ಮುಟ್ಟಿಸುವ ಹಾಗೂ ಅವರು ತೋರಿದ ಮಾರ್ಗದರ್ಶನದಲ್ಲಿ ಯುವಜನತೆಯನ್ನು ಪ್ರೇರೇಪಿಸುವ ದಿಶೆಯಲ್ಲಿ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಪ್ರಯುಕ್ತ, ಕರ್ನಾಟಕ ರಾಜ್ಯದಲ್ಲಿರುವ ರಾಮಕೃಷ್ಣ ಮಹಾಸಂಘದ ಎಲ್ಲ ಕೇಂದ್ರಗಳ ಒಟ್ಟು ಸಹಕಾರದೊಂದಿಗೆ, ೨೦೧೨ ರ ಜನವರಿ ೧ ರಿಂದ ೩೦ ರ ತನಕ **‘ಸ್ವಾಮಿ ವಿವೇಕಾನಂದ ಜ್ಯೋತಿಯಾತ್ರೆ’** ಯನ್ನು ಆಯೋಜಿಸಲಾಗಿತ್ತು. ರಾಜ್ಯದ ಬಹುತೇಕ ಜಿಲ್ಲೆಗಳಿಗೆ ಸಂಚರಿಸಿದ ಈ ಯಾತ್ರೆಯು ಲಕ್ಷಾಂತರ ವಿದ್ಯಾರ್ಥಿಗಳು, ಯುವಜನರು ಮತ್ತು ಸಾರ್ವಜನಿಕರಿಗೆ ವಿವೇಕಾನಂದರ ಸಂದೇಶವನ್ನು ಬಿತ್ತರಿಸುವಲ್ಲಿ ಯಶಸ್ವಿಯಾಯಿತು ಎನ್ನುವುದು ನಿಸ್ಸಂದೇಹ.















೨೦೧೨ ರ ಜನವರಿ ೧ ರಂದು ಬೀದರ್ ನಗರದಲ್ಲಿ ಉದ್ಘಾಟನೆಗೊಂಡು, ಜನವರಿ ೩೦ರಂದು ಬೆಂಗಳೂರಿನಲ್ಲಿ ಸಮಾಪನ ಗೊಂಡ ಈ ಯಾತ್ರೆಯು ಮುಖ್ಯವಾಗಿ ರಾಜ್ಯದ ಯುವಸಮೂಹವನ್ನು ಗಮನ ದಲ್ಲಿಟ್ಟುಕೊಂಡಿತ್ತು. ಆಯಾ ಜಾಗದ ಸ್ಥಳೀಯ ಸಂಘಸಂಸ್ಥೆಗಳ, ಶೈಕ್ಷಣಿಕ ವಿದ್ಯಾಲಯಗಳ ಸಹಕಾರದೊಂದಿಗೆ ಆಯೋಜನೆಗೊಂಡಿದ್ದ ಈ ಯಾತ್ರೆಯ ಸ್ವರೂಪ ಹೀಗಿತ್ತು: ೧. ಸಾರ್ವಜನಿಕ ಸತ್ಸಂಗ, ೨. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬಹಿರಂಗ ಸಭಾಕಾರ್ಯ ಕ್ರಮ ಮತ್ತು ೩. ವಿವೇಕಾನಂದರ ಜೀವನ ಸಂದೇಶಗಳನ್ನು ಒಳಗೊಂಡ ಪ್ರದರ್ಶಿನಿ.

ಪ್ರತಿ ಜಿಲ್ಲೆಗೆ ಸಂಜೆ ಆಗಮಿಸುವ ಯಾತ್ರೆ ಸಾರ್ವಜನಿಕರಿಗಾಗಿ ಸತ್ಸಂಗವನ್ನು ಮೊದಲು ನಡೆಸಿಕೊಡುತ್ತಿತ್ತು. ಮರುದಿನ ಬೆಳಗ್ಗೆ ಜಿಲ್ಲಾ ಕೇಂದ್ರದ ಶಾಲಾಕಾಲೇಜು ವಿದ್ಯಾರ್ಥಿಗಳು ಬೃಹತ್ ಮೆರವಣಿಗೆಯ ಮೂಲಕ ನಿಗದಿತ ಸ್ಥಾನಕ್ಕೆ ಬಂದು ಸಮಾವೇಶಗೊಳ್ಳುತ್ತಿದ್ದರು. ಅಲ್ಲಿ ಯುವಸಮಾವೇಶ ನಡೆಯುತ್ತಿತ್ತು. ಇದೇ ಸಮಯದಲ್ಲಿ ಅವರಿಗೆ ಸ್ವಾಮಿ ವಿವೇಕಾನಂದರ ಬಗೆಗಿನ ರಿಯಾಯತಿ ದರದ ಪುಸ್ತಕಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕೊಳ್ಳುವ ಮತ್ತು ಪ್ರದರ್ಶನವನ್ನು ವೀಕ್ಷಿ ಸುವ ಅವಕಾಶ ದೊರಕುತ್ತಿತ್ತು. ಇದಲ್ಲದೆ ಸಾಧ್ಯವಾದ ಕಡೆಗಳಲ್ಲೆಲ್ಲಾ ಒಂದು ತಂಡವು ನಿಗದಿತ ತಾಲ್ಲೂಕು ಕೇಂದ್ರದಲ್ಲಿ ಕೂಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿತ್ತು.

ಈ ಬೃಹತ್ ಅಭಿಯಾನದಲ್ಲಿ ಸಹಕರಿ ಸಲು ೭೦ಕ್ಕೂ ಹೆಚ್ಚು ಸ್ವಯಂಸೇವಕರ ದೊಡ್ಡ ತಂಡವು ಒಂದು ತಿಂಗಳ ಕಾಲ ಸಂಚಾರ ಮಾಡಿತು. ಹತ್ತಕ್ಕೂ ಹೆಚ್ಚು ವಾಹನ ಗಳನ್ನು ಈ ಯಾತ್ರೆಗೆ ನಿಯೋಜಿಸಲಾಗಿತ್ತು. ಸ್ವಾಮಿ ವಿವೇಕಾನಂದರ ಎರಡು ಪ್ರತಿಮೆಗಳು ರಾಜ್ಯಾದ್ಯಂತ ಯಾತ್ರೆಯಲ್ಲಿ ಸಂಚಾರ ಮಾಡಿ ದವು. ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ರಾಘವೇಶಾ ನಂದಜಿ ಅವರ ಮಾರ್ಗದರ್ಶನದಲ್ಲಿ, ಆಶ್ರಮದ ಸಂನ್ಯಾಸಿಗಳಾದ ಸ್ವಾಮಿ ತದ್ಯುಕ್ತಾ ನಂದಜಿ ಮತ್ತು ಸ್ವಾಮಿ ವಿಶೇಷಾನಂದಜಿ ಈ ಬೃಹತ್ ಅಭಿಯಾನದ ಆಯೋಜನೆಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದರು. ರಾಮಕೃಷ್ಣ